c) Whether the districts, which are industrially backward have been identified in the State;

d) The action taken by the Government to establish and industry at Channapatna Taluk.

Sri Nisar Ahamed (Minister of State for Small Scale Industries)

a) No such scheme is in existence

b) Not applicable

c) No, however, talukas have been classified into zones depending on the backwardness of the taluk i.e, Zone-I, Zone-II, Zone-III & Zone-IV, incentives on the capital investment made by the unit between 15% to 25% subject to a maximum of Rs.15.00 lakhs to Rs. 25.00 lakhs respectively is being extended and also sales tax exemption between 3 to 6 years is being extended in addition to the stamp duty exemption, conversion fine waiver etc.

d) The Channapatna Taluk has been clasified under Zone-II taluk and investment subsidy of 15% subject to a maximum of Rs.15.00 lakhs is being extended for the new units that are being established after 1.10.90. The sales tax exemption for a period of 3 years is also being estended in addition to exemption of stamp duty and concessional registratiion charges for loan documents, lease/sale deeds to be executed by the new units in favour of State Government agencies/financial institutions. Regular Industrial Campaign/Seminars are being conducted to guide the entrepreneurs for starting of Industries. In addition one entrepreneural Development Programme has been conducted to train 34 prospective enterepreneurs for starting of Industries. The promoters/Industrialists who comes forward for establishment of Medium and Large Scale Industries are being encouraged by providing of infrastructural facilities and incentives.

ವಿಷಯ: ರಾಜ್ಯದಲ್ಲಿ ಮಕ್ಕಳ ಸಾವು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 379 (755)

ಶ್ರೀ ಜಿ. ರಾಜುಗೌಡ (ಹನೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು, ಉತ್ತರಿಸುವರೆ.

ಅ) ರಾಜ್ಯದಲ್ಲಿ ಹುಟ್ಟುವ ಪ್ರತಿ ಸಾವಿರ ಮಕ್ಕಳಿಗೆ ಎಷ್ಟು ಮಕ್ಕಳು ಸಾಯುತ್ತಿದ್ದಾರೆ?

ಆ) ಇದನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಹುಟ್ಟುವ ಪ್ರತಿ ಸಾವಿರ ಮಕ್ಕಳಿಗೆ ಒಂದು ವರ್ಷದ 71 ಮಕ್ಕಳು ಸಾಯುತ್ತಿದ್ದಾರೆ.

ಆ) ಮಕ್ಕಳು ಸಾಯುವುದನ್ನು ಕಡಿಮೆ ಮಾಡಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಅ)ನವಜಾತು ಶಿಶುವಿನಲ್ಲಿ ಧನುರ್‌ವಾಯುವನ್ನು ತಡೆಯುವುದಕ್ಕೆ ತಾಯಿಗೆ ಧನುರ್ವಾಯು ನಿರೋಧಕ ಚುಚ್ಚುಮದ್ದು ಕೊಡಲಾಗುತ್ತಿದೆ.

ಆ)ಮಗುವಿನ ಉಳಿವಿಗಾಗಿ ಪ್ರಸವಪೂರ್ವ, ಪ್ರಸವಕಾಲ ಹಾಗೂ ಪ್ರಸವೋತ್ತರ ಸೇವೆಯನ್ನು ಮಹಿಳೆಯರಿಗೆ ಒದಗಿಸಲಾಗುತ್ತಿದೆ.

ಇ)ಅಪಕ್ವತೆ ಹಾಗೂ ಕಡಿಮೆ ತೂಕದ ಕಾರಣಗಳಿಂದ ಮಕ್ಕಳು ಸಾಯುವುದನ್ನು ತಡೆಗಟ್ಟಲು (ತಾಯಂದಿರಲ್ಲಿ ಬರುವ ರಕ್ತ ಹೀನತೆಯಿಂದ ಉಂಟಾಗುವ) ಗರ್ಭಿಣಿಯರಿಗೆ ಕಬ್ಬಿಣ ಮತ್ತು ಫೋಲಿಕ್ ಆಮ್ಲದ ಮಾತ್ರೆಗಳನ್ನು ಕೊಡಲಾಗುತ್ತಿದೆ.

ಈ)ನಂಜಿನಿಂದ ಮಗು ಸಾಯುವುದನ್ನು ತಡೆಗಟ್ಟಲು, ನಂಜುರಹಿತ ಹೆರಿಗೆ ನಿರ್ವಹಿಸಲು ದಾದಿಯರಿಗೆ ತರಬೇತಿ ನೀಡಲಾಗುತ್ತಿದೆ.

ಉ)6 ಮಾರಕ ರೋಗಗಳಿಂದ ಆಗುವ ಮರಣಗಳನ್ನು ತಪ್ಪಿಸಲು ಮಕ್ಕಳಿಗೆ ವರ್ಷ ತುಂಬುವುದರೊಳಗಾಗಿ ಲಸಿಕೆಗಳನ್ನು ನೀಡಲಾಗುತ್ತಿದೆ.

ಊ)ಅತಿಸಾರ ಭೇದಿಯಿಂದಾಗುವ ಮರಣಗಳನ್ನು ತಡೆಯಲು ಅತಿಸಾರ ಭೇದಿಯಿಂದ ನರಳುವ ಮಕ್ಕಳಿಗೆ ಕೊಡಲು ಈ ಮೌಖಿಕ ಪುನರ್ಜಲೀಕರಣದ ಪೊಟ್ಟಣಗಳನ್ನು ವಿತರಿಸಲಾಗುತ್ತಿದೆ.

ಋ)ನ್ಯುಮೋನಿಯದಿಂದಾಗುವ ಮರಣಗಳನ್ನು ತಡೆಯಲು ನ್ಯೂಮೋನಿಯಾದಿಂದ ನರಳುವ ಮಕ್ಕಳುಗಳಿಗೆ 'ಕೊಟ್ರೈಮೆಕ್ಸೊಜಾಲ್' ಮಾತ್ರೆಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 1991-92ನೆ ಇಸವಿಯಿಂದ ಕೊಡಲಾಗುತ್ತಿದೆ.

ಋೂ)ತಾಯಿ ಮತ್ತು ಮಕ್ಕಳಲ್ಲಿ ಸಂಭವಿಸಬಹುದಾದ ಸಾವುಗಳನ್ನು ತಪ್ಪಿಸಲು 'ಮಕ್ಕಳ ಉಳಿವು ಮತ್ತು ಸುರಕ್ಷಿತ ತಾಯ್ತನ' ಎಂಬ ಹೊಸ ಕಾರ್ಯಕ್ರಮವನ್ನು 1992 ಏಪ್ರಿಲ್ ತಿಂಗಳಿಂದ 7 ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗುವುದು. ನಂತರ ಕ್ರಮವಾಗಿ ಉಳಿದ ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗುವುದು.

ಎ)ಪೌಷ್ಟಿಕ ಆಹಾರ, ಲಸಿಕಾ ಕಾರ್ಯಕ್ರಮ ಹಾಗೂ ಮಕ್ಕಳಲ್ಲಿ ಉದ್ಭವಿಸಬಹುದಾದ ಸಮಸ್ಯೆಗಳಾದ ಅತಿಸಾರ ಭೇದಿ ನ್ಯೂಮೋನಿಯಾದ ಬಗ್ಗೆ ಕಾಳಜಿ ಮಹಿಸುವ ಕುರಿತು ತಾಯಂದಿರಿಗೆ ಆರೋಗ್ಯ ಶಿಕ್ಷಣದ ಮುಖಾಂತರ ಮಾಹಿತಿ ನೀಡಲಾಗುತ್ತಿದೆ.

ಶಾಸನಾತ್ಮಕ ನಿರ್ಣಯ

ಜಂಟಿ ಪರಿಶೀಲನಾ ಸಮಿತಿಯ ಕಾಲಾವಧಿ ವಿಸ್ತರಣೆ.

ಉಪಾಧ್ಯಕ್ಷರಿಣಿಯವರು:- 1991ನೇ ಇಸವಿಯ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯ ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಒಪ್ಪಿಸಲು 1992ನೇ ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಲು ಸಭೆಯು ಅನುಮತಿ ನೀಡಬೇಕೆಂದು ಸಭೆಯ ಮುಂದಿರುವ ಪ್ರಸ್ತಾವ :

ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎಂ. ವೀರಪ್ಪ ಮೊಯಿಲಿ :- ಉಪಸಭಾಪತಿಯವರೆ, ದಿನಾಂಕ 20-3-92ರ ಲಿಖಿತ ಮೂಲಕ ಉತ್ತರಿಸುವ 19ನೇ ಪಟ್ಟಿಯಲ್ಲಿರುವ 67 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ 53 ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ವಿಷಯ: ನೆಲಮಂಗಲ ಮತ ಕ್ಷೇತ್ರದಲ್ಲಿರುವ ಕಲ್ಲುಗಣಿ ಗುತ್ತಿಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1325 (1540)

ಶ್ರೀ ಅಂಜನಮೂರ್ತಿ (ನೆಲಮಂಗಲ) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ನೆಲಮಂಗಲ ಮತ ಕ್ಷೇತ್ರದಲ್ಲಿ ಎಷ್ಟು ಜನಕ್ಕೆ ಕಲ್ಲು ಗಣಿ ಗುತ್ತಿಗೆ ನೀಡಲಾಗಿದೆ ?

ಆ) ಆ ಗುತ್ತಿಗೆದಾರರು ಹೆಚ್ಚು ಭಾಗ ಒತ್ತುವರಿ ಮಾಡಿ ಕಲ್ಲು ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ಗುತ್ತಿಗೆದಾರರಿಂದ ಸರ್ಕಾರಕ್ಕೆ ವರ್ಷಕ್ಕೆ ಎಷ್ಟು ಆದಾಯ ಬರುತ್ತದೆ ?

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು)

ಅ) ನೆಲಮಂಗಲ ತಾಲ್ಲೂಕಿನಲ್ಲಿ ಸದ್ಯ ಚಾಲ್ತಿಯಲ್ಲಿರುವ ಗುತ್ತಿಗೆಗಳು ಒಟ್ಟು 73 ಜನಕ್ಕೆ ಮಂಜೂರು ಮಾಡಿದೆ. ಅದರಲ್ಲಿ ಕಟ್ಟಡದ ಕಲ್ಲು 60 ಗುತ್ತಿಗೆಗಳು ಇಟ್ಟಿಗೆ ಮಣ್ಣು 12 ಗುತ್ತಿಗೆಗಳು ಒಂದು ಪಿಂಗ್ ಗ್ರಾನೈಟ್ ಗುತ್ತಿಗೆ.

ಆ) ಹೆಚ್ಚುವರಿ ಪ್ರದೇಶದಲ್ಲಿ ಅನಧಿಕೃತವಾಗಿ ಕೆಲಸ ಮಾಡುತ್ತಿರುವ ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ. ಇಂತಹ ಕಲ್ಲು ಗಣಿ ಕೆಲಸ ಮಾಡುವುದನ್ನು ಗುರ್ತಿಸಿ, ಕಲ್ಲು ಗಣಿ ಕೆಲಸಗಳನ್ನು ನಿಲ್ಲಿಸಲಾಗುತ್ತಿದೆ. ಅಂತಹವರಲ್ಲಿ ಕಟ್ಟಡದ ಕಲ್ಲು, ಇಟ್ಟಿಗೆ ಇವುಗಳ ಅನಧಿಕೃತ ಕೆಲಸ ಮಾಡುತ್ತಿರುವ ಹಾಗೂ ಕಲ್ಲು ಗಣಿಗಾರಿಕೆಯ ಮೇಲೆಯೇ ಜೀವನ ನಡೆಸುತ್ತಿರುವವರನ್ನು ಗುರ್ತಿಸಿ, ಅಧಿಕೃತ ಕೆಲಸ ಮಾಡುವಂತೆ ಅವರಿಂದ ಅರ್ಜಿಗಳನ್ನು ಪಡೆದು ಗುತ್ತಿಗೆಗಳನ್ನು ಹಿಂದಿನ ಅನಧಿಕೃತವಾಗಿ ಮಾಡಿದ ಗಣಿಗಾರಿಕೆಗೆ ದಂಡ ವಿಧಿಸಿ, ರಾಜಧನವನ್ನು ವಸೂಲು ಮಾಡಿ ಮಂಜೂರು ಮಾಡಲಾಗುತ್ತಿದೆ. ಅನಧಿಕೃತವಾಗಿ ಗ್ರಾನೈಟ್ ಕಲ್ಲುಗಳನ್ನು ಸಾಗಿಸುವವರ ಮೇಲೆ ರಾಜಧನ ಮತ್ತು ರಾಜಧನದ ಐದು ಪಟ್ಟು ಹಣ ದಂಡವಾಗಿ ವಸೂಲು ಮಾಡಲು ಎಲ್ಲಾ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಹಾಗೂ ವಾಣಿಜ್ಯ ತೆರಿಗೆ ಇಲಾಖೆಯ ಚೆಕ್ ಪೋಸ್ಟ್‌ಗಳನ್ನು ಉಪಯೋಗಿಸಿಕೊಂಡು ಇತರೆ ಖನಿಜಗಳ ರವಾನೆಯನ್ನು ಪೂರ್ಣ ನಿಯಂತ್ರಣಕ್ಕೊಳಪಡಿಸುವ ಉದ್ದೇಶ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) 1991-92ನೇ ಸಾಲಿನಲ್ಲಿ ರೂ. 3,13,475.00 ರಾಜಧನ ಸಮದಾಯವಾಗಿದೆ.

ವಿಷಯ:- ನೆಲಮಂಗಲ ಕ್ಷೇತ್ರದಲ್ಲಿರುವ ಆಯುರ್ವೇದಿ ಆಸ್ಪತ್ರೆಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1326 (1541)

ಶ್ರೀ ಅಂಜನಮೂರ್ತಿ (ನೆಲಮಂಗಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ನೆಲಮಂಗಲ ಮತಕ್ಷೇತ್ರದಲ್ಲಿ ಎಷ್ಟು ಆಯುರ್ವೇದಿಕ್ ಆಸ್ಪತ್ರೆಗಳಿವೆ ? (ಹೋಬಳಿವಾರು, ಗ್ರಾಮವಾರು ಮಾಹಿತಿ ನೀಡುವುದು)

2. [illegible]